ಆ) ಉಪ ಕಾರಾಗೃಹದ ಕಟ್ಟಡ ಕಾಮಗಾರಿ ಪೂರ್ಣಗೊಂಡಿದ್ದು ಕಟ್ಟಡ ಕಾರಾಗೃಹ ಇಲಾಖೆಗೆ ವಹಿಸದೇ ಇರಲು ಕಾರಣವೇನು;

ಇ) ಕಟ್ಟಡ ಕಾರಾಗೃಹ ಇಲಾಖೆಗೆ ನೀಡಿ ಅವಶ್ಯವಿರುವ ವಿವಿಧ ದರ್ಜೆಯ ಸಿಬ್ಬಂದಿ ನಿಯೋಜನೆ ಮಾಡುವುದು ಅವಶ್ಯವಿಲ್ಲವೇ;

ಈ) ಈ ಉಪ ಕಾರಾಗೃಹಕ್ಕೆ ಮಂಜೂರಾದ ವಿವಿಧ ದರ್ಜೆಯ ಹುದ್ದೆಗಳೆಷ್ಟು;

ಉ) ಕಾಥಾಗೃಹ ಇಲಾಖೆಯಿಂದ ಪುನರ್ ಪ್ರಾರಂಭಿಸಲು ಬೇಕಾಗುವ ಕಾಲಾವಕಾಶ ಎಷ್ಟು?

ಶ್ರೀ ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಹಾಗೂ ಬಂದೀಖಾನೆ ಸಚಿವರು):

ಅ) ನಿಜ.

ಆ) ಅಗತ್ಯವಾದ ಕನಿಷ್ಠ ಸಿಬ್ಬಂದಿ ಹುದ್ದೆಗಳ ಸೃಜನೆಯಾಗದ ಕಾರಣ ಇಲಾಖೆಯ ವಶಕ್ಕೆ ಪಡೆಯಲಾಗಿಲ್ಲ.

ಇ) ಅವಶ್ಯವಿದೆ.

ಈ) ಇದುವರೆಗೆ ಯಾವುದೇ ಹುದ್ದೆ ಮಂಜೂರಾಗಿಲ್ಲ.

ಉ) ಕಾರಾಗೃಹ ಇಲಾಖೆಯಲ್ಲಿ ಪುನರ್ ವಿಂಗಡನೆಗಾಗಿ ವಿವಿಧ ಹುದ್ದೆಗಳನ್ನು ಸೃಜಿಸಲು, ಸರ್ಕಾರದ ಕಾರ್ಯದರ್ಶಿ, ಇಲಾಖಾ ಮುಖ್ಯಸ್ಥರು ಹಾಗೂ ಇನ್ನಿತರ ಅಧಿಕಾರಿಗಳೊಂದಿಗೆ ಒಂದು ಸಮಿತಿಯನ್ನು ರಚಿಸಿ ಹುದ್ದೆಗಳ ಸೃಜನೆಗಳ ಬಗ್ಗೆ ಪರಿಶೀಲಿಸಲಾಗುತ್ತದೆ.

ವಕ್ಫ್ ಮತ್ತು ಅಲ್ಪಸಂಖ್ಯಾತರ ಇಲಾಖೆಯಿಂದ ಸೇಡಂ ತಾಲ್ಲೂಕಿಗೆ ಬಿಡುಗಡೆಯಾಗಿರುವ ಹಣ

170 (592) ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ): ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಕಳೆದ 3 ವರ್ಷಗಳಿಂದ ಸೇಡಂ ತಾಲ್ಲೂಕಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; ಹಾಗೂ ಯಾವ ಕಾರ್ಯಕ್ರಮಗಳಿಗೆ ಉಪಯೋಗಿಸಲಾಗಿದೆ; (ವಿವರ ನೀಡುವುದು)

ಆ) ಕಳೆದ ಮೂರು ವರ್ಷದಿಂದ ಈ ವರ್ಷ 2010–11ನೇ ಸಾಲಿನಲ್ಲಿ ತೆಗೆದುಕೊಂಡಿರುವ ಕಾಮಗಾರಿ ಹಾಗೂ ಬಿಡುಗಡೆಯಾಗಿರುವ ಹಣವೆಷ್ಟು; (ವಿವರ ನೀಡುವುದು)?

ಪ್ರ. ಅ. ಮುಮ್ತಾಜ್ ಅಲಿ ಖಾನ್ (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):

ಅ) ಸೇಡಂ ತಾಲ್ಲೂಕಿಗೆ ಕಳೆದ 3 ವರ್ಷಗಳಿಂದ ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ವತಿಯಿಂದ ಯಾವುದೇ ಅನುದಾನ ಮಂಜೂರಾಗಿರುವುದಿಲ್ಲ.

ಸೇಡಂ ತಾಲ್ಲೂಕಿಗೆ ಕಳೆದ ಮೂರು ವರ್ಷಗಳಿಂದ ಅಲ್ಪಸಂಖ್ಯಾತರ ಇಲಾಖೆಯಿಂದ ಬಿಡುಗಡೆಯಾದ ಅನುದಾನ ಹಾಗೂ ಕಾರ್ಯಕ್ರಮಗಳಿಗೆ ಉಪಯೋಗಿಸಲಾದ ಅನುದಾನದ ವಿವರ ಅನುಬಂಧದಲ್ಲಿ ಲಗತ್ತಿಸಿದೆ.

ಆ) ಸೇಡಂ ತಾಲ್ಲೂಕಿನಲ್ಲಿ ಅಲ್ಪಸಂಖ್ಯಾತರಿಗಾಗಿ ಯಾವುದೇ ಕಾಮಗಾರಿ ಕೈಗೊಂಡಿರುವುದಿಲ್ಲ. ಆದ್ದರಿಂದ ಯಾವುದೇ ಹಣ ಬಿಡುಗಡೆ ಮಾಡಿರುವುದಿಲ್ಲ.

ಡಾ॥ ಶರಣ ಪ್ರಕಾಶ ರುದ್ರಪ್ಪ (ಸೇಡಂ) ವಿಧಾನಸಭೆಯ ಸದಸ್ಯರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 592ಕ್ಕೆ ಅನುಬಂಧ

ಕ್ರ ಸಂ.	ವರ್ಷ	ಯೋಜನೆ ಹೆಸರು	ಕಾಲೇಜಿನ ಹೆಸರು	ಕೋರ್ಸ್	ಮಂಜೂರು ಮಾಡಿದ ಮೊತ್ತ	ಫಲಾನುಬವಿಗಳ ಸಂಖ್ಯೆ
1	2	3	4	5	6	7
1	2007–08	ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡುವ ಬಗ್ಗೆ	1. ಸರಕಾರಿ ಪ್ರಥಮ ದರ್ಜೆ ಕಾಲೇಜ್ ಸೇಡಂ	ಬಿ.ಕಾಂ	4000.00	1
		ಕಲಿಕಾ ಬೋಧನಾ ಸಾಮಗ್ರಿಗಳು	2. ಸರಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ರಹೆಮತ ನಗರ ಸೇಡಂ	–	10000.00	1 ಶಾಲೆ
			3) ಸರಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ರಹೆಮತ ನಗರ ಮಳಖೇಡ	–	10000.00	1 ಶಾಲೆ

1	2	3	4	5	6	7
			4) ಅಲ್ಡಮೀನ ಉರ್ದು ಹಿರಿಯ ಪ್ರಾಥಮಿಕ ಶಾಲೆ ಸೇಡಂ	–	10000.00	1 ಶಾಲೆ
			5) ಸರಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆ ಉರ್ದು ಪ್ರಾಥಮಿಕ ಶಾಲೆ	–	10000.00	1 ಶಾಲೆ
			6) ಸರಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ರಹೆಮತ ನಗರ ಮಳಖೇಡ	–	10000.00	1 ಶಾಲೆ
			7) ಅಲ್ಡಮೀನ ಉರ್ದು ಹಿರಿಯ ಪ್ರಾಥಮಿಕ ಸೇಡಂ	–	10000.00	1 ಶಾಲೆ
			8) ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಬಟಗೇರಾ ತಾಲ್ಲೂಕು ಸೇಡಂ	–	10000.00	1 ಶಾಲೆ
2	2008–09	ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡುವ ಬಗ್ಗೆ	1) ಸರಕಾರಿ ಪದವಿಪೂರ್ವ ಕಾಲೇಜ್ ಮುಧೋಳ ತಾಲ್ಲೂಕು ಸೇಡಂ	ಪಿ.ಯು.ಸಿ.	9000.00	3
			ನೃಪತುಂಗ ಕಲಾ ವಾಣಿಜ್ಯ ಮತ್ತು ವಿಜ್ಞಾನ ಪ್ರಥಮ ದರ್ಜೆ ಕಾಲೇಜ್ ಸೇಡಂ	ಪದವಿ	4000.00	1